# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 588

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 17.12.2021.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಕಳೆದ 3 ತಿಂಗಳಿಂದ ಮಳೆ ಅವಾಂತರದಿಂದ ಹಾನಿಯಾಗಿರುವ ಬೆಳೆಗಳಾವುವು;(ವಿವರ ನೀಡುವುದು | ರಾಜ್ಯದಲ್ಲಿ ಕಳೆದ 3 ತಿಂಗಳಿಂದ ಮಳೆ ಅವಾಂತರದಿಂದ ಈರುಳ್ಳಿ, ಟೊಮ್ಯಾಟೋ, ಮೆಣಸಿನಕಾಯಿ, ಎಲೆಕೋಸ್, ಹೂಕೋಸ್, ಆಲೂಗಡ್ಡೆ, ಇತರೆ ತರಕಾರಿಗಳು, ಬಾಳೆ, ದಾಳಿಂಬೆ, ಪಪ್ಪಾಯ, ದ್ರಾಕ್ಷಿ, ಕರಿಮೆಣಸು, ಅಡಿಕೆ, ಶುಂಠಿ, ಹೂವುಗಳು ಮತ್ತು ಇತ್ಯಾದಿ ತೋಟಗಾರಿಕೆ ಬೆಳೆಗಳು ಹಾನಿಯಾಗಿರುತ್ತವೆ. |
| ಆ) | ಕೆಂಗೆಟ್ಟಿರುವ ತೋಟಗಾರಿಕೆ ಬೆಳೆಗಾರರಿಗೆ ಸರ್ಕಾರದಿಂದ ನೀಡಿರುವ ಪರಿಹಾರ ಏನು; ಯಾವ ಆಧಾರದಲ್ಲಿ ನೀಡಲಾಗಿದೆ? (ವಿವರ ನೀಡುವುದು) | ಕೆಂಗೆಟ್ಟಿರುವ ತೋಟಗಾರಿಕೆ ಬೆಳೆಗಾರರಿಗೆ ರಾಷ್ಟ್ರೀಯ/ರಾಜ್ಯ ವಿಪತ್ತು ಪರಿಹಾರ ನಿಧಿ(NDRF/SDRF) ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್ ವಾರ್ಷಿಕ ಮಳೆಯಾಶ್ರಿತ ಬೆಳೆಗಳಿಗೆ ರೂ.13500 ಪ್ರತಿ ಹೆ. ಮತ್ತು ಬಹುವಾರ್ಷಿಕ ಬೆಳೆಗಳಿಗೆ ರೂ.18000 ಪ್ರತಿ ಹೆ. ರಂತೆ ಪ್ರತಿ ಫಲಾನುಭವಿಗೆ ಗರಿಷ್ಟ 2.00 ಹೆಕ್ಟೇರ್ ವರೆಗೆ ಕಂದಾಯ ಇಲಾಖೆ ಮುಖಾಂತರ ಪರಿಹಾರಧನ ವಿತರಿಸಲಾಗುತ್ತಿದೆ.<br><br>ಕಳೆದ 3 ತಿಂಗಳಿಂದ ಮಳೆ ಅವಾಂತರದಿಂದ ಉಂಟಾದ ಬೆಳೆ ಹಾನಿಗೆ ಸಂಬಂಧಿಸಿದಂತೆ ಈವರೆಗೆ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಸೇರಿದಂತೆ ಒಟ್ಟಾರೆ 444112 ಸಂ. ಫಲಾನುಭವಿಗಳಿಗೆ ಕಂದಾಯ ಇಲಾಖೆಯ ಮುಖಾಂತರ ರೂ.413.09 ಕೋಟಿ ಸಹಾಯಧನ ಪಾವತಿಸಲಾಗಿರುತ್ತದೆ. |

HORTI 539 HGM 2021

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.